ದಿಃ 17-12-2016 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ತಕರಾರುದಾರ ನಂ 2 (ಪ್ರಾಸಾ-1) ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರಿಂದ ಮುಂದುವರೆದ ಮುಖ್ಯ ವಿಚಾರಣೆಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ. ಕಿರ್ಲೋಸ್ಕರ್ ಎಜುಕೇಷನ್ ಟ್ರಸ್ಟ್ ಇವರಿಗೆ ಮಾರಾಟ ಮಾಡಿದ ಜಮೀನಿನ ಕುರಿತು ಕ್ರಯಪತ್ರದ ದೃಡೀಕೃತ ನಕಲು ಮತ್ತು ಅದರ ಟೈಪ್ಡ್ ಕಾಪಿ ನಿಪಿ-37 ಮತ್ತು ನಿಪಿ-37(ಎ), ಮ್ಯೂಟೇಷನ್ ನಕಲು ನಿಪಿ-38, ಆರ್.ಟಿ.ಸಿ ನಿಪಿ-39, ಕಿರ್ಲೋಸ್ಕರ್ ಕಂಪನಿಯವರು ದಾವಾ ಸರ್ವೆ ನಂಬರಿನಲ್ಲಿ ಭೂ ಸ್ವಾದೀನ ಪಡಿಸಿಕೊಂಡ ಕುರಿತು ಅಧಿಸೂಚನೆ ಜೆರಾಕ್ಸ್ ಹಾಜರು ಪಡಿಸಿರುತ್ತೇನೆ. ಬೀರಪ್ಪ ಮತ್ತು ನಾಗಪ್ಪ ಇವರ ನಡುವೆ ಆದ ಪಾಲು ವಿಭಾಗ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-40, ಮತ್ತು ಅದರ ಬೆರಳಚ್ಚು ಮಾಡಿಸಿದ ಪ್ರತಿ ಹಾಜರು ಪಡಿಸಿರುತ್ತಾರೆ ಅದನ್ನು ನಿಪಿ-40(ಎ), ನಿಪಿ-1 ರ ಟೈಪ್ಡ್ ಕಾಪಿ ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

ಡಿಕ್ರಿದಾರಕರ ಪರ ವಕೀಲರಾದ ಶ್ರೀ ಬಿ.ಎಚ್ ಇವರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುವುದರಿಂದ ಪಾಟೀ ಸವಾಲನ್ನು ಮೂಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,

ಹರಿಹರ.